**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಪಿ.ಸಿ.ಆರ್. ನಂ. 24/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ |
| ತಂದೆಯ ಹೆಸರು | : | ಸಿದ್ದಪ್ಪದೇವರು |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಳ್ಳದಮನುಗನಹಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 21.05.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಭಾರತ ದಂಡ ಪ್ರಕ್ರಿಯೆ ಸಂಹಿತೆ ಕಲಂ 200 ಸಹವಾಚಕ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಪಿರ್ಯಾದುದಾರರನ ಸಾಕ್ಷಿದಾರರ ಪ್ರಮಾಣ ಪೂರ್ವ ಹೇಳಿಕೆಃ ಪಿರ್ಯಾದಿ ಪರ ಶ್ರೀ. ಸ್ವಾಮಿ / ಶ್ರೀ. ಬಿ.ಹೆಚ್.ಆರ್. ವಕೀಲರಿಂದಃ**

ನಾನು ಹೆಚ್.ಡಿ. ಕೋಟೆಯ ಹಳ್ಳದಮನುಗನಹಳ್ಳಿ ಗ್ರಾಮದ ವಾಸಿಯಾಗಿದ್ದು, ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು 2023 ನೇ ಇಸವಿಯಲ್ಲಿ ಶಿಂಡೇನಹಳ್ಳಿ ಗ್ರಾಮದ ಕೆಂಪಮ್ಮ ಎನ್ನುವವರ ಜಮೀನನ್ನು ಗುತ್ತಿಗೆಗೆ ಪಡೆದು ಶುಂಠಿ ಬೆಳೆ ಹಾಕಿರುತ್ತೇನೆ. ಹೀಗಿರುವಾಗ 01 ದಿನ ಹೆಚ್.ಡಿ. ಕೋಟೆಯ ಪೋಲೀಸ್ ಠಾಣೆಯ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲ ನನಗೆ ಫೋನ್ ಕರೆ ಮಾಡಿ ನೀನು ಬೇರೆಯವರ ಜಮೀನಿನಲ್ಲಿ ಶುಂಠಿ ಬೆಳೆದಿದ್ದೀಯಾ, ನೀನು ಕಂಪಮ್ಮರವರನ್ನು ಕರೆದುಕೊಂಡು ಠಾಣೆಗೆ ಬರಬೇಕೆಂದು ತಿಳಿಸಿರುತ್ತಾರೆ. ಆ ಪ್ರಕಾರ ನಾನು ಹಾಗು ನನಗೆ ಜಮೀನನ್ನು ಗುತ್ತಿಗೆಗೆ ನೀಡಿದ ಕೆಂಪಮ್ಮರವರನ್ನು ಕರೆದುಕೊಂಡು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ

ಹೋಗಿದ್ದು ಆಗ ಅಲ್ಲಿದ್ದ ಸದರಿ ಠಾಣೆಯ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲರವರು ಸದರಿ ಜಮೀನು ನಿಮ್ಮದಲ್ಲ ಅದು ಆನಂದ್ ರಾಜ್ ಎನ್ನುವವರಿಗೆ ಸೇರಿದ ಜಮೀನಾಗಿರುತ್ತದೆ, ಕೋರ್ಟ್ ನಿಂದ ಅವರ ಹೆಸರಿಗೆ ಆಗಿರುತ್ತದೆಂದು ತಿಳಿಸಿರುತ್ತಾರೆ. ಆಗ ಕೆಂಪಮ್ಮರವರು ಇದು ನಮ್ಮ ತಾತನ ಕಾಲದಿಂದಲೂ ನಮಗೆ ಸೇರಿದ ಜಮೀನಾಗಿರುತ್ತದೆ ಎಂದು ಹೇಳಿ ಅದು ಅವರಿಗೆ ಹೇಗೆ ಆಗಿದೆ ಎಂದು ನನಗೆ ಗೊತ್ತಿಲ್ಲ ನನಗೆ 15 ದಿವಸ ಕಾಲಾವಕಾಶ ಕೊಡಿ ನಾನು ಗ್ರಾಮದಲ್ಲಿ ಮಾತನಾಡಿಕೊಂಡು ಬರುವುದಾಗಿ ತಿಳಿಸಿ ಬಂದಿರುತ್ತೇವೆ. ನಂತರ ಗ್ರಾಮದಲ್ಲಿ ಸದರಿ ವಿಚಾರವನ್ನು ಪ್ರಸ್ತಾಪ ಮಾಡಿದ್ದು ಗ್ರಾಮದವರು ಸಹ ಅದು ಹೇಗೆ ಆನಂದರಾಜ್ ರವರಿಗೆ ಆಗಿದೆ ಎಂದು ತಮಗೆ ಗೊತ್ತಿಲ್ಲವೆಂದು ತಿಳಿಸಿರುತ್ತಾರೆ. ನಾವು ಠಾಣೆಗೆ ಹೋಗಿ ಬಂದ 02 ದಿನಕ್ಕೆ ಸದರಿ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲರವರು ನನಗೆ ಫೋನ್ ಕರೆ ಮಾಡಿ ನನ್ನಲ್ಲಿ ಠಾಣೆಗೆ ಒಬ್ಬನೇ ಬರುವಂತೆ ತಿಳಿಸಿದ್ದು ಆಗ ನಾನು ಗ್ರಾಮಸ್ಥರನ್ನು ಕರೆದುಕೊಂಡು ಬರುವುದಾಗಿ ಅವರಲ್ಲಿ ತಿಳಿಸಿದ್ದು ಆಗ ಗ್ರಾಮಸ್ಥರು ಯಾರು ಎಂದು ಅವರು ನನ್ನಲ್ಲಿ ಕೇಳಿದ್ದು ಆಗ ನಾನು ಶಿಂಡೇನಹಳ್ಳಿಯ ಯತೀಶ್ ಕುಮಾರ್ ಹಾಗು ಹಳ್ಳದಮನುಗನಹಳ್ಳಿಯ ನಂಜೇಗೌಡರನ್ನು ಕರೆದುಕೊಂಡು ಬರುವುದಾಗಿ ತಿಳಿಸಿರುತ್ತೇನೆ. ಆಗ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲರವರು ನನ್ನ ಬಳಿ ಯಾವ ಯತೀಶ್ ಕುಮಾರ್ ಎಂದು ಕೇಳಿದ್ದು ಆಗ ನಾನು ಅವರು ಶಿಂಡೇನಹಳ್ಳಿ ಗ್ರಾಮದವರಾಗಿದ್ದು ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿರುತ್ತಾರೆಂದು ತಿಳಿಸಿರುತ್ತಾರೆ. ಆಗ ಅವರು ಆ ಬೋಳೀಮಗನನ್ನು ಏಕೆ ಕರೆದುಕೊಂಡು ಬರುತ್ತೀಯಾ, ಆ ಕುರುಬನಿಗೆ ಏನು ಗೊತ್ತಿದೆ ಎಂದು ಫೋನ್ ನಲ್ಲಿ ಅವಾಚ್ಯವಾಗಿ ನಿಂದಿಸಿ ಬೈದಿರುತ್ತಾರೆ. ಸದರಿ

ವಿಚಾರವು ನನ್ನ ಮೊಬೈಲ್ ನ ಆಟೋ ರೆಕಾರ್ಡಿಂಗ್ ನಲ್ಲಿ ಉಳಿದಿರುತ್ತದೆ / ಸೇವ್ ಆಗಿರುತ್ತದೆ. ನಂತರ ನಾನು ಸದರಿ ಎಲ್ಲಾ ವಿಚಾರವನ್ನು ನಮ್ಮೂರಿನ ಆನಂದ ಹೆಚ್.ವಿ. ರವರಿಗೆ ತಿಳಿಸಿದ್ದು ಆಗ ಅವರು ನೀನು ಸುಳ್ಳು ಹೇಳುತ್ತೀಯಾ, ಅವರು ನಿನಗೇಕೆ ಕರೆ ಮಾಡುತ್ತಾರೆಂದು ಹೇಳಿದ್ದು ಆಗ ನಾನು ಅವರಿಗೆ ನೀನು ನಂಬದಿದ್ದರೆ ಅವರು ನನಗೆ ಕರೆ ಮಾಡಿ ಯತೀಶ್ ಅಣ್ಣನಿಗೆ ಬೈದ ಆಡಿಯೋ ರೆಕಾರ್ಡಿಂಗ್ ಕಳುಹಿಸುತ್ತೇನೆಂದು ಹೇಳಿ ಸದರಿ ಆಡಿಯೋ ರೆಕಾರ್ಡಿಂಗ್ ಆನಂದ್ ರವರಿಗೆ ಕಳುಹಿಸಿರುತ್ತೇನೆ. ನಂತರ ಸದರಿ ಆನಂದರವರು ಸದರಿ ಆಡಿಯೋ ರೆಕಾರ್ಡಿಂಗ್ ಅನ್ನು ಯತೀಶ್ ಅಣ್ಣ ಹಾಗು ಕೃಷ್ಣೇಗೌಡರವರಿಗೆ ಕಳುಹಿಸಿರುತ್ತಾರೆ. ನಂತರ ನಾನು, ಯತೀಶ್ ಅಣ್ಣ ಮತ್ತು ಕೃಷ್ಣೇಗೌಡರು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಬಂದು ಯತೀಶ್ ಅಣ್ಣ ಈ ಬಗ್ಗೆ ಪಿ.ಎಸ್.ಐ. ಆದಂತಹ ರಸೂಲ್ ಪಾಗೇವಾಲರವರಲ್ಲಿ ಏಕೆ ನನಗೆ ಏನೇನೋ ಬೈಯುತ್ತಿದ್ದೀರಾ ಎಂದು ಕೇಳಿದ್ದು ಆಗ ಅವರು ಯತೀಶ್ ಅಣ್ಣನಿಗೆ ಮತ್ತೆ ಬೋಳೀಮಗನೇ, ಸೂಳೇಮಗನೇ ನಿನಗೆ ಯಾರು ಮರ್ಯಾದೆ ಕೊಡುತ್ತಾರೆ, ನೀನು ಕುರುಬ ಎಂದೆಲ್ಲಾ ಮತ್ತೆ ಅಲ್ಲಿಯೂ ಸಹ ಬೈದಿರುತ್ತಾರೆ. ನಂತರ ನಾವು ಅಲ್ಲಿಂದ ಹೊರಟು ನಾನು ಮನೆಗೆ ಹೋಗಿದ್ದು, ಯತೀಶ್ ಅಣ್ಣ ಹಾಗು ಕೃಷ್ಣೇಗೌಡರು ರಸೂಲ್ ಪಾಗೇವಾಲರವರ ವಿರುದ್ದ ದೂರನ್ನು ನೀಡಲು ಮೈಸೂರಿನ ಎಸ್.ಪಿ. ಕಛೇರಿ ಹಾಗು ಹುಣಸೂರಿನ ಡಿ.ವೈ.ಎಸ್.ಪಿ. ಕಛೇರಿಗೆ ಹೋಗುತ್ತೇವೆಂದು ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**